**2 ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ.**

**ಎಸ್.ಸಿ ನಂ:- 167/2019**

ಪಿ ಡಬ್ಲೂ: 11

ಸಿ ಡಬ್ಲೂ: 10

| | | |
|---|---|---|
| ಸಾಕ್ಷಿದಾರರ ಹೆಸರು | :: | ಜಲನ್ |
| ತಂದೆಯ ಹೆಸರು | :: | ಜಗದೀಶ |
| ವಯಸ್ಸು | :: | 20 ವರ್ಷ |
| ವೃತ್ತಿ | :: | ಪದವಿ ವಿದ್ಯಾರ್ಥಿ |
| ವಾಸ | :: | ಲಕ್ಷ್ಮೀಪುರ |

ದಿನಾಂಕ 01-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಸರ್ಕಾರಿ ಅಭಿಯೋಜಕರಿಂದ:-

ನ್ಯಾಯಾಲಯದ ಮುಂದೆ ಇರುವ 1ನೇ ಆರೋಪಿಯು ನನ್ನ ಅಜ್ಜಿ 2ನೇ ಆರೋಪಿಯು ನನ್ನ ತಂದೆ. ನನ್ನ ತಾಯಿಯ ಹೆಸರು ಲಕ್ಷ್ಮೀ. ನಮ್ಮ ತಂದೆ-ತಾಯಿಗೆ ನಾನು ಮತ್ತು ನನ್ನ ತಂಗಿ ಜಲನ್ಯ ಮಕ್ಕಳು. ನಾನು ನನ್ನ ತಂದೆಯವರ ಜೊತೆಗೆ ಕೊಪ್ಪದಲ್ಲಿ ವಾಸವಾಗಿದ್ದೇನೆ. ನನ್ನ ತಂದೆ ಕೆ ಇ ಬಿ ಯಲ್ಲಿ ಕೊಪ್ಪದಲ್ಲಿ ಜ್ಯೂನಿಯರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾರೆ.

ಚಾಸ 2 ನನ್ನ ತಂದೆಯ ಸ್ನೇಹಿತರು. ಚಾಸ 3 ನಮ್ಮ ಎದುರುಮನೆಯವರು. ಚಾಸ 4 ನಮ್ಮ ಪಕ್ಕದ ಮನೆಯವರು. ಚಾಸ 5 ನನ್ನ ತಂಗಿ. ಚಾಸ 6 ನನ್ನ ಅಜ್ಜ. ಚಾಸ 7 ನನ್ನ ಅಮ್ಮನ ಸಹೋದರಿ. ಚಾಸ 8 ನನ್ನ ಮಾವ. ಚಾಸ 9 ನನ್ನ ಸಂಬಂಧಿ ಮತ್ತು ಮಾವ. ಚಾಸ 12 ಮತ್ತು 13 ನಮ್ಮ ಊರಿನವರು.

ನನ್ನ ಅಮ್ಮ ತೀರಿಕೊಂಡಿದ್ದಾರೆ. ನನ್ನ ತಾಯಿ ತೀರಿಕೊಂಡಾಗ ನಾನು ಆಕೆಯನ್ನು ಮೈಸೂರಿನ ಆಸ್ಪತ್ರೆಯ ಶವಾಗಾರದಲ್ಲಿ ನೋಡಿದ್ದೇನೆ. ನನ್ನ ತಾಯಿ ತೀರಿಕೊಂಡಾಗ ಲಕ್ಷ್ಮೀಪುರ ಗ್ರಾಮದಲ್ಲಿ ನಾನು, ನನ್ನ ತಾಯಿ, ತಂಗಿ ಮತ್ತು ಅಜ್ಜಿ (1ನೇ ಆರೋಪಿ) ವಾಸಿಸುತ್ತಿದ್ದೆವು. ನನ್ನ ತಂದೆಯು ಕೊಪ್ಪದಲ್ಲಿ ಕೆಲಸ ಮಾಡಿಕೊಂಡಿದ್ದರು. ನಾನು ಮತ್ತು ನನ್ನ ತಂಗಿ ಊರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದುದರಿಂದ ನಾವು ಲಕ್ಷ್ಮೀಪುರದಲ್ಲಿ ವಾಸವಾಗಿದ್ದೆವು. ನನ್ನ ತಂದೆ ಕೊಪ್ಪದಲ್ಲಿ ಕೆಲಸ ಮಾಡಿಕೊಂಡಿದ್ದರು.

ನನ್ನ ತಾಯಿ ಹೊಸ ವರ್ಷದ ದಿನ ಸೀಮೆಎಣ್ಣೆ ಸ್ಟವ್ ಸಿಡಿದು ತೀರಿಕೊಡಿದ್ದಾರೆ. ನನ್ನ ತಾಯಿ ತೀರಿಕೊಳ್ಳಲು ಬೇರೆ ಯಾವುದೇ ಕಾರಣ ಇರುವುದಿಲ್ಲ. ನನ್ನ ತಾಯಿ ಕಿರುಚಿದ ಶಬ್ಧವನ್ನು ಕೇಳಿ ನಾನು ನನ್ನ ತಂಗಿ ಹೋಗಿ ಹೋಡಿದ್ದೆವು. ಆಗ ನನ್ನ ತಾಯಿಯ ದೇಹ ಬೆಂಕಿಯಿಂದ ಉರಿಯುತ್ತಿತ್ತು. ನಾನು ಮತ್ತು ನನ್ನ ತಂಗಿ ಬೆಂಕಿಯನ್ನು ಆರಿಸಲು ನೀರು ಹಾಕಿ ನನ್ನ ತಾಯಿಯನ್ನು ಸುಧಾರಿಸಿದೆವು.

ನಾನು ಮತ್ತು ನನ್ನ ಮಾವ ಸೇರಿ ನನ್ನ ತಾಯಿಯನ್ನು ಹೊಳೆ ನರಸೀಪುರ ಆಸ್ಪತ್ರೆಗೆ ಹೋಗಿ ಸೇರಿಸಿದೆವು. ಅಲ್ಲಿ ಆಗುವುದಿಲ್ಲವೆಂದು ತಿಳಿಸಿದ ಮೇಲೆ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ವೈದ್ಯರ ಸಲಹೆಯ ಮೇರೆಗೆ ಮೈಸೂರಿನ ಕೆ ಆರ್ ಆಸ್ಪತ್ರೆಗೆ ಆ್ಯಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋದೆವು.

ನನ್ನ ತಾಯಿಯು *13* ದಿನ ಸುಟ್ಟಗಾಯದಿಂದ ನರಳಿ ಚಿಕಿತ್ಸೆಯು ಫಲಕಾರಿಯಾಗದೇ *14* ನೇ ತಾರೀಖು ಕೆ ಆರ್ ಆಸ್ಪತ್ರೆಯಲ್ಲಿ ಮೃತ ಪಟ್ಟಿದ್ದಾರೆ. ಆ ನಂತರ ನನ್ನ ತಾಯಿಯ ದೇಹವನ್ನು ಊರಿಗೆ ತಂದು ಅಂತಿಮ ಸಂಸ್ಕಾರವನ್ನು ಮಾಡಿದ್ದೇವೆ.

ನನ್ನ ತಾಯಿ ತೀರಿಕೊಳ್ಳಲು ಸೀಮೆಎಣ್ಣೆ ಸ್ಟವ್ ಸಿಡಿದಿದ್ದೇ ಕಾರಣವಾಗಿದೆ, ಬೇರೆಯಾವುದೇ ಕಾರಣವಿಲ್ಲ. ನಾನು ಪೊಲೀಸರ ಬಳಿ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

ದಿಃ 1-1-18 ರಂದು ರಾತ್ರಿ ಸುಮಾರು 10 ಗಂಟೆಯ ಸಮಯದಲ್ಲಿ ನಾನು ಮತ್ತು ನನ್ನ ತಂಗಿ, ತಾಯಿ, ಮನೆಯಲ್ಲಿದ್ದಾಗ ನನ್ನ ತಂದೆಯು ನನ್ನ ತಾಯಿಗೆ ಫೋನ್ ಮಾಡಿದಾಗ ನನ್ನ ಅಮ್ಮ ಹೊಸ ವರ್ಷಕ್ಕೆ ಮಕ್ಕಳಿಗೆ ಏನೂ ತಂದುಕೊಟ್ಟಿಲ್ಲ, ಫೋನ್ ಮಾಡಿದರೆ ಏನು ಪ್ರಯೋಜನ ಎಂದು ನನ್ನ ತಂದೆಗೆ ಕೇಳಿದಾಗ, ಅಲ್ಲೇ ಇದ್ದ ನನ್ನ ಅಜ್ಜಿ 1 ನೇ ಆರೋಪಿಯು ನನ್ನ ತಾಯಿಯನ್ನು ಉದ್ದೇಶಿಸಿ " ನನ್ನ ಮಗ ತಂದು ಕೊಡದೇ ಊರಿನವರು ತಂದುಕೊಡುತ್ತಾರಾ " ಎಂದು ಬಾಯಿಗೆ ಬಂದಂತೆ ಬೈದರು ಎಂದರೆ ಸರಿಯಲ್ಲ. ನನ್ನ ಅಜ್ಜಿಯು ನನ್ನ ತಾಯಿಯನ್ನು ಉದ್ದೇಶಿಸಿ ಮನೆಯನ್ನು ಬಿಟ್ಟು ಹೋಗಿ ಎಲ್ಲಾದರೂ ಸಾಯಿ ಎಂದು ಬೈದರು ಎಂದರೆ ಸರಿಯಲ್ಲ. ಅದಕ್ಕೆ ನನ್ನ ಅಮ್ಮ ಬೇಜಾರು ಮಾಡಿಕೊಂಡು ಅಳುತ್ತಾ ರಾತ್ರಿ 11 ಗಂಟೆಯ ವೇಳೆಗೆ ಬಚ್ಚಲು ಮನೆಗೆ ಓಡಿ ಹೋಗಿ ಕ್ಯಾನ್ ನಲ್ಲಿದ್ದ ಸೀಮೆಎಣ್ಣೆಯನ್ನು ತನ್ನ ಮೇಲೆ ಸುರಿದುಕೊಂಡು ಬೆಂಕಿ ಕಡ್ಡಿಯಿಂದ ಬೆಂಕಿ ಹಚ್ಚಿಕೊಂಡು ಚೀರಾಡಿದಳು ಎಂದರೆ ಸರಿಯಲ್ಲ.

ನಮ್ಮ ಅಪ್ಪ ಜಗಧೀಶ ಮತ್ತು ಅಜ್ಜಿ ಸಣ್ಣಮುದ್ದಮ್ಮ ನಮ್ಮ ಅಮ್ಮನಿಗೆ ಹಿಂಸೆ ಕೊಟ್ಟಿದ್ದರಿಂದ ನನ್ನ ಅಮ್ಮನಿಗೆ ಬೇಜಾರಾಗಿ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಾಕಿಕೊಂಡು ಗಾಯ ಹುಷಾರಾಗದೇ ಸತ್ತು

ಹೋದರು ಎಂದರೆ ಸರಿಯಲ್ಲ. ನಾನು ನನ್ನ ಮತ್ತು ಅಜ್ಜಿಗೆ ಖುಲಾಸೆಯಾಗಲಿ ಎಂಬ ಕಾರಣದಿಂದ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಪೊಲೀಸರ ಸಮಕ್ಷಮ ದಿಃ 1-1-18 ರಂದು - - - - - - - - - - - - - - - - - - - - - - - - ಚೀರಾಡಿದರು ಎಂದು ನನ್ನ ಹೇಳಿಕೆಯನ್ನು ನೀಡಿರತ್ತೇನೆಂದರೆ ಸರಿಯಲ್ಲ. ಹೇಳಿಕೆಯನ್ನು ಸಾಕ್ಷಿದಾರಿಗೆ ಓದಿ ಹೇಳಿದಾಗ ನಿರಾಕರಿಸಿದ್ದು, ಸದರಿ ಹೇಳಿಕೆಯ ಭಾಗವನ್ನು ನಿಪಿ16 ಎಂದು ಗುರುತಿಸಲಾಯಿತು. ನಂತರ ಹೇಳಿಕೆಯಲ್ಲಿ ನಮ್ಮ ಅಪ್ಪ ಜಗದೀಶ - - - - - - - - - - - - - - - ಹೇಳಿಕೆಯನ್ನು ನೀಡಿರುತ್ತೇನೆ. ಎಂದು ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ಓದಿ ಹೇಳಿದಾಗ ಸಾಕ್ಷಿದಾರರು ನಿರಾಕರಿಸಿದ್ದು, ಸದರಿ ಹೇಳಿಕೆಯನ್ನು ನಿಪಿ 17 ಎಂದು ಗುರುತಿಸಲಾಯಿತು.

ನಾನು ನಿಪಿ16 ಮತ್ತು 17 ರಂತೆ ಹೇಳಿಕೆ ನೀಡಿದ್ದರೂ ಸಹ ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಎಂ ಎಸ್ ಪಿ ವಕೀಲರಿಂದಃ</u>**

ಹಾಸನದ ಆಸ್ಪತ್ರೆಯಲ್ಲಿ ನನ್ನ ತಾಯಿ ಒಂದು ದಿನ ಅಂದರೆ ಒಂದು ರಾತ್ರಿ ಕಳೆದಿದ್ದಾರೆ. ಕೆ ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನನ್ನ ತಾಯಿಯ ಜೊತೆಗೆ ನಾನು ಸಹ ಇದ್ದೆ.

ಪ್ರಶ್ನೆಃ ನಿನ್ನ ತಾಯಿ ಹಾಸನದ ಸರ್ಕಾರಿ ಆಸ್ಪತ್ರೆಯಲ್ಲಿರುವಾಗ ಪೊಲೀಸರು ಏನಾದರೂ ಹೇಳಿಕೆ ಮಾಡಿಕೊಂಡರಾ?

ಉತ್ತರಃ ನನ್ನ ತಾಯಿಯು ಅರೆ ಪ್ರಜ್ಞಾವಸ್ಥೆಯಲ್ಲಿದ್ದು ಯಾವುದೇ ಹೇಳಿಕೆ ನಿಡೀರುವುದಿಲ್ಲ.

<u>ಮರು ವಿಚಾರಣೆಃ ಇಲ್ಲ</u>

*(ಸಾಕ್ಷಿಯ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಪಡಿಸಲಾಯಿತು.)*

*ಓ.ಹೇ.ಕೇ. ಸರಿ ಇದೆ.*

*2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್*
*ನ್ಯಾಯಾಧೀಶರು, ಹಾಸನ.*